(ಅರ್ಜಿದಾರರು ಹಾಕಿದ ಅರ್ಜಿಯನ್ನು ಪುರಸ್ಕರಿಸಿ ಸಾಕ್ಷಿಯನ್ನು ಪುನಃ ಕರೆಯಲಾಯಿತು ಮತ್ತು ಸಾಕ್ಷಿಯು ತೀವ್ರತರದ ಕ್ಯಾನ್ಸರ್ ತುತ್ತಿಗೆ ಒಳಗಾಗಿದ್ದರಿಂದ ಪಾಟಿ ಸವಾಲನ್ನು ಬೇಗನೆ ಮುಗಿಸಬೇಕೆಂದು ನಿರ್ದೇಶಿಸಿದೆ).
**ದಿಃ-05-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು : ವಾದಿ ಪರ ಶ್ರೀ. ಹೆಚ್.ಎಸ್.ಪಿ ವಕೀಲರಿಂದ :**

15. ಪ್ರಸ್ತುತ ಈ ದಿನ ಪ್ರತಿವಾದಿಯವರು ನನ್ನತ ಂದೆಯವರು ಮರಣದ ನಂತರ ಭಾಗವಾಗಿ ನೀಡಿದ ಚಿಕ್ಕಲ್ಲಸಂದ್ರದ ಒಂದು ಮನೆಯಲ್ಲಿ ವಾಸವಾಗಿದ್ದಾರೆ. ಕರಾರು ಪತ್ರದಲ್ಲಿ ಪ್ರತಿವಾದಿಯವರು ಅವರ ಗಂಡನ ಮನೆಯ ವಿಳಾಸವನ್ನು ನೀಡದೇ ತನ್ನ ತಂದೆಯ ಮನೆಯ ವಿಳಾಸವನ್ನು ನೀಡಿದ ಕಾರಣವೇನೆಂದು ಕೇಳಿದಾಗ ಸಾಕ್ಷಿಯು ಅವರ ಗಂಡನ ಮನೆ ಹಾವೇರಿಯಲ್ಲಿದ್ದು ಆದರೆ ಅವರು ಬೆಂಗಳೂರಿನಲ್ಲಿ ಪ್ರತಿವಾದಿಯವರ ತಂದೆಯ ಮನೆಯಲ್ಲಿ ವಾಸವಿದ್ದುದ್ದರಿಂದ ಬೆಂಗಳೂರಿನ ತಂದೆಯ ಮನೆಯ ವಿಳಾಸವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆಕೆಯ ಗಂಡನಿಗೆ ಬೇರೆ ಮನೆ ಇತ್ತು ಎಂದರೆ ಸರಿಯಲ್ಲ.

16. ಪ್ರತಿವಾದಿಯವರು ಜಯನಗರದ ಮನೆಯನ್ನು ಬಿಟ್ಟು ಬೇರೆ ಮನೆಯಲ್ಲಿ ವಾಸವಿದ್ದರಾ ಎಂಬ ಪ್ರಶ್ನೆಗೆ ನನಗೆ ಈಗ ನೆನಪಾಗುತ್ತಿಲ್ಲ. ಪ್ರತಿವಾದಿಯವರು ಬೇರೆ ಮನೆಯಲ್ಲಿ ವಾಸವಿದ್ದುದ್ದರಿಂದ ವಾದಿಯವರು ಕಳಿಸಿದ ಎಲ್ಲಾ ಪತ್ರಗಳು ವಾಪಾಸು ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಬೇರೆಯವರು ಕಳಿಸಿದ ಎಲ್ಲಾ ಪತ್ರಗಳು ಪ್ರತಿವಾದಿಯವರು ವಾದಿಗೆ ನೀಡಿದ ವಿಳಾಸಕ್ಕೆ

ಬಂದು ತಲುಪುತ್ತಿದ್ದು ವಾದಿಯವರು ಕಳಿಸಿದ ಪತ್ರ ಯಾಕೆ ಬಂದಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬೇರೆಯವರು ಕಳಿಸಿದ ಪತ್ರ ಪ್ರತಿವಾದಿಯವರಿಗೆ ತಲುಪಿದ ಬಗ್ಗೆ ತೋರಿಸಲು ದಾಖಲೆ ಈಗ ನನ್ನ ಬಳಿ ಇಲ್ಲ. ನನ್ನ ತಂದೆಯವರ ಮರಣಕ್ಕಿಂತ ಮೊದಲು ಜಯನಗರದ ಮನೆಯನ್ನು ತಂದೆಯವರು ಮಾರಾಟ ಮಾಡಿರುತ್ತಾರೆ. ಅದು ಯಾವಾಗ ಮಾರಾಟ ಮಾಡಿದ್ದಾರೆ ಎಂದು ನನಗೆ ಈಗ ನೆನಪಾಗುತ್ತಿಲ್ಲ.

17. ಪ್ರತಿವಾದಿಯವರು ವಾದಿಯವರ ವಿರುದ್ಧ ಕಟ್ಟಡವನ್ನು ಕೆಡವಲು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಹಾಕಿದ್ದರು ಎಂದರೆ ಸಾಕ್ಷಿಯು ವಾದಿಯವರು ಪ್ಲಾನ್ ಉಲ್ಲಂಘನೆ ಮಾಡಿದ್ದರಿಂದ ಪ್ರತಿವಾದಿಯವರಷ್ಟೇ ಅಲ್ಲದೇ ನೆರೆಹೊರೆಯವರು ಸೇರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನಷ್ಟೇ ಅಲ್ಲದೇ ಬಿಬಿಎಂಪಿಯವರಿಗೂ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ರಿಟ್ ಅರ್ಜಿಯನ್ನು ಕ್ರಯದ ಕರಾರು ಪತ್ರವಾಗುವ ಮೊದಲು ಹಾಕಿರುತ್ತೇವೆ.

18. ಈ ದಾವೆಯು ಚಾಲ್ತಿಯಲ್ಲಿದ್ದಾಗ ವಾದಿಯವರು ದಾವಾ ಸ್ವತ್ತನ್ನು ಖರೀದಿಸಲು ತಯಾರಿದ್ದು ನನ್ನಲ್ಲಿ ದಾಖಲೆಗಳನ್ನು ಕೇಳಿದಾಗ ನಾನು ಕೊಡದೇ ಇದ್ದುದ್ದರಿಂದಲೇ ಕ್ರಯ ಪತ್ರವನ್ನು ಮಾಡಲಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಬ್ಯಾಂಕಿನವರು ಹಾಜರು ಪಡಿಸಿದ ಎಲ್ಲಾ ದಾಖಲೆಗಳನ್ನು ವಾದಿಯವರು ಒಂದು ಪ್ರತಿಯನ್ನು

ಪಡೆದು ಪರಿಶೀಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಬ್ಯಾಂಕಿನವರು ನೀಡಿದ ದಾಖಲೆಯಲ್ಲಿ ಬಿಲ್ಡಿಂಗ್ ಪ್ಲಾನು ಮತ್ತು ಪಿ.ಸೂರ್ಯನಾರಾಯಣ ರಾವ್ ರವರು ಕೆ.ನಾರಾಯಣಸ್ವಾಮಿಯವರಿಗೆ ಮಾಡಿಕೊಟ್ಟ ಜಿಪಿಎ ದಾಖಲೆ ಇಲ್ಲ ಎಂದರೆ ಸರಿಯಲ್ಲ. ವಾದಿಯವರಲ್ಲಿ ವಾದ ಪತ್ರದ ಸ್ವತ್ತನ್ನು ಖರೀದಿಸುವ ಪ್ರತಿಫಲದ ಹಣ ಯಾವತ್ತಿಗೂ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯವರು ವಾದಿಯವರಿಗೆ ಮೇಲಿನ 2 ದಾಖಲೆಗಳನ್ನು ನೀಡಿದ್ದರೆ ವಾದಿಯವರು ಎಲ್ಲಾ ಕಾಲಗಳಲ್ಲಿಯೂ ತಮ್ಮ ಭಾಗದ ಒಪ್ಪಂದವನ್ನು ನಿರ್ವಹಿಸಲು ತಯಾರಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು 12 ಕೋಟಿ ರೂಪಾಯಿಗೆ ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್ ನಲ್ಲಿ ಸುಸ್ತಿದಾರರಾಗಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನಾನು ಮೇಲಿನ ಜಿಪಿಎ ಮತ್ತು ಸ್ಯಾಂಕ್ಷನ್ ಪ್ಲಾನು ಹಾಜರು ಪಡಿಸಿಲ್ಲ ಎಂದರೆ ನನಗೆ ಈಗ ನೆನಪಾಗುತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**